**<u>ಹೆಚ್ಚುವರಿ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ</u>**

**ಸಿಸಿ ನಂ. 595/2019**

| | | | |
|---|---|---|---|
| **ಹೆಸರು** | **:** | **ಮಂಗಲ** | **ಚಾ.ಸಾ.4** |
| **ತಂದೆಯ ಹೆಸರು** | **:** | **ನಾಗಯ್ಯಾ** | **ಪ್ರಾ.ಸಾ.4** |
| **ವಯಸ್ಸು** | **:** | **30 ವರ್ಷ** | **ದಿನಾಂಕಃ 22-08-2023** |
| **ಉದ್ಯೋಗ** | **:** | **ಗೃಹಿಣಿ** | |
| **ವಾಸಸ್ಥಳ** | **:** | **ಹುಲಸಗೂಡ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ</u>**

ಚಾಸಾ-1 ನನ್ನ ತಾಯಿ. ಪ್ರಾಸಾ-3 ನನ್ನ ತಂದೆ. ಚಾಸಾ-6 ಮತ್ತು 7 ರವರು ನಮ್ಮ ಮನೆಯ ಪಕ್ಕದವರು.

ಈಗ 14 ವರ್ಷಗಳ ಹಿಂದೆ ನಾನು ಮತ್ತು ಪ್ರಾಸಾ-1 ರವರು ಮನೆಯಲ್ಲಿ ಇದ್ದಾಗ ರಾತ್ರಿ 8.20 ಗಂಟೆಗೆ ಕುಡೀದು ಬಂದು ರಂಡಿ ಭೊಸಡಿ ಎಂದು ನನಗೆ ಮತ್ತು ಪ್ರಾಸಾ-1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾನೆ. ಆರೋಪಿ ಬಡಿಗೆಯಿಂದ ಪ್ರಾಸಾ-1 ರವರ ತಲೆಗೆ ಹೊಡೆದಿರುತ್ತಾನೆ. ನಂತರ ಅಲ್ಲಿಂದ ಹೋಗಿರುತ್ತಾನೆ. ಆರೋಪಿ ನನ್ನ ಕೈಯಲ್ಲಿ ಇದ್ದ ಫೋನನ್ನು ಬಿಸಾಕಿ ಹೊಡೆದಿರುತ್ತಾನೆ. ನಂತರ ನಾನು ಮತ್ತು ಪ್ರಾಸಾ-1 ರವರು ಸೇರಿ ಪೊಲೀಸ ಠಾಣೆಗೆ ಹೋಡಿ ದೂರು ನೀಡಿ ಅಲ್ಲಿಂದ ರಟಕಲ ಸರಕಾರಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದಿರುತ್ತೇವೆ. ಘಟನೆಯ ಬಗ್ಗೆ ನಾನು ಪೊಲೀಸರಿಗೆ ಹೇಳಿದ್ದೇನೆ.

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**
**ಓ.ಹೇ.ಕೇ. ಸರಿ ಇದೆ.**

**ಹೆಚ್ಚುವರಿ ಪ್ರ.ದ.ನ್ಯಾ.ದಂ. ಚಿಂಚೋಳಿ**